# ವಿಕಿಪಿಡಿಯಾ ಹುಡುಗಿ

‘ವಿಕಿಪಿಡಿಯಾ’ ಸಿನಿಮಾದಲ್ಲಿ ನಟಿಸುತ್ತಿರುವ **ಆಶಿಕಾ ಸೋಮಶೇಖರ್** ಅವರ ಪಾಲಿಗೆ ನಟನೆ ಎನ್ನುವುದು ವ್ಯಕ್ತಿತ್ವ ರೂಪಿಸುವ ಮಾಧ್ಯಮ.

■ **ಪದ್ಮನಾಭ ಭಟ್**

‘ಮುಂದುವರಿದ ಅಧ್ಯಾಯ’ ಎಂಬುದು ಆಶಿಕಾ ಸೋಮಶೇಖರ್ ನಟಿಸಿದ ಮೊದಲ ಸಿನಿಮಾ. ಅವರ ನಟನೆಯ ದಾರಿ ಅಲ್ಲಿಂದ ಮುಂದೆ ಮುಂದುವರಿಯುತ್ತಲೇ, ಹೊಸ ಹೊಸ ಅಧ್ಯಾಯಗಳನ್ನು ಜೋಡಿಸಿಕೊಳ್ಳುತ್ತಲೇ ಸಾಗಿದೆ.

ಆಶಿಕಾ ಅವರ ಮೂಲ ತೀರ್ಥಹಳ್ಳಿ ಸಮೀಪದ ಒಂದು ಊರು. ಆದರೆ ಹುಟ್ಟಿ ಬೆಳೆದಿದ್ದು, ಓದಿದ್ದೆಲ್ಲವೂ ಬೆಂಗಳೂರಿನಲ್ಲಿಯೇ. ಭರತನಾಟ್ಯ ಕಲಾವಿದೆಯೂ ಆಗಿರುವ ಅವರಿಗೆ ಮೊದಲಿನಿಂದಲೂ ಬಣ್ಣದ ಲೋಕದ ಬಗ್ಗೆ ವಿಶೇಷ ಸೆಳೆತ ಇತ್ತು. ಆ ಸೆಳೆತವು ಕನಸಾಗಿ ಬದಲಾಗಿದ್ದು ಪಿಯುಸಿಯಲ್ಲಿ.

‘ಕಾಲೇಜು ದಿನಗಳಲ್ಲಿ ನಾನು ಸಾಕಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೆ. ಹಲವು ಪ್ರಶಸ್ತಿಗಳೂ ಬರುತ್ತಿದ್ದವು. ವೇದಿಕೆಯ ಮೇಲೆ ಏರಿದಾಗ ಸಿಗುವ ಸಂತೋಷವೇ ನನ್ನನ್ನು ಬಣ್ಣದ ಲೋಕದ ಕಡೆಗೆ ಸೆಳೆಯಿತು ಅನಿಸುತ್ತದೆ. ನಾನು ಸಿನಿಮಾ ಹಿನ್ನೆಲೆಯಿಂದ ಬಂದವಳಲ್ಲ. ಆದರೆ, ಛಲದಿಂದ ಪ್ರಯತ್ನಿಸಿದರೆ ನಾವು ಕಾಣುವ ಕನಸು ಎಷ್ಟೇ ದೊಡ್ಡದಾಗಿದ್ದರೂ ನನಸಾಗಿಸಿಕೊಳ್ಳುವುದು ಸಾಧ್ಯ ಎಂಬ ಮಾತಿನಲ್ಲಿ ನನಗೆ ನಂಬಿಕೆ ಇತ್ತು. ನನಗೆ ಕಲೆಯಲ್ಲಿ ಆಸಕ್ತಿ ಇತ್ತು. ಅದರಲ್ಲಿ ಸಾಕಷ್ಟು ಖುಷಿ ಮತ್ತು ತೃಪ್ತಿಯೂ ಸಿಗುತ್ತಿತ್ತು. ಹಾಗಾಗಿ ಅದೇ ಕ್ಷೇತ್ರದಲ್ಲಿ ಮುಂದುವರಿಯಲು ನಿರ್ಧರಿಸಿದೆ’ ಎನ್ನುವ ಆಶಿಕಾ ನಟನೆಯ ಪಯಣ ಪ್ರಾರಂಭಿಸಿದ್ದು ರಂಗಭೂಮಿಯ ಮುಖಾಂತರ.

‘ಬೆಂಗಳೂರು ಥಿಯೇಟರ್ ಎನ್ಸಂಬಲ್’ ಎಂಬ ಹವ್ಯಾಸಿ ರಂಗತಂಡದಲ್ಲಿ ಕೆಲಸ ಮಾಡುತ್ತಲೇ ಅವರು ಸಿನಿಮಾ ಆಡಿಷನ್‌ಗಳಿಗೂ ಎಡತಾಗುತ್ತಿದ್ದರು. ಆಗ ಅವರಿಗೆ ಮೊದಲು ಅವಕಾಶ ಸಿಕ್ಕಿದ್ದು ‘ಮುಂದುವರಿದ ಅಧ್ಯಾಯ’ ಸಿನಿಮಾದಲ್ಲಿ. ಸಾಕ್ಷಿ ಎಂಬ ಪತ್ರಕರ್ತೆಯ ಪಾತ್ರದಲ್ಲಿ ನಟಿಸಿದ್ದರು. ಅದರ ನಂತರ ‘ಅ ಡೇಟ್’ ಎಂಬ ಇಂಗ್ಲಿಷ್ ಇಂಡಿಪೆಂಡೆಂಟ್ ಸಿನಿಮಾದಲ್ಲಿ ನಟಿಸಿದರು. ಆ ಸಿನಿಮಾ ಅವರಿಗೆ ಇಂದಿಗೂ ಖುಷಿ ಕೊಡುವ ಸಿನಿಮಾವಂತೆ. ಈಗ ಯೂಟ್ಯೂಬಲ್ಲಿ ಲಭ್ಯವಿರುವ ಆ ಸಿನಿಮಾ ನೋಡಿ ಈಗಲೂ ಜನರು ಅವರಿಗೆ ಮೆಸೇಜ್ ಮಾಡುತ್ತಾರಂತೆ.

ಈಗ ‘ವಿಕಿಪಿಡಿಯಾ’ ಎಂಬ ಸಿನಿಮಾದಲ್ಲಿ ಮುಖ್ಯಪಾತ್ರದಲ್ಲಿ ನಟಿಸುತ್ತಿರುವ ಆಶಿಕಾಗೆ, ಈ ಸಿನಿಮಾದ ಬಗ್ಗೆ ಸಾಕಷ್ಟು ನಿರೀಕ್ಷೆಗಳಿವೆ.

‘ವಿಕಾಸ್ ಎಂಬ ಹುಡುಗನ ಬದುಕಿನ ಪಯಣವೇ ಈ ಸಿನಿಮಾ ಕಥೆ. ಆ ಪಯಣದಲ್ಲಿ ಅವನು ಬೇರೆ ಬೇರೆ ಜನರನ್ನು ಭೇಟಿಯಾಗುತ್ತ ಹೋಗುತ್ತಾನೆ. ಹಾಗೆಯೇ ರಚನಾ ಎಂಬ ಹುಡುಗಿಯನ್ನೂ ಭೇಟಿಯಾಗುತ್ತಾನೆ. ನಾನು ಆ ಪಾತ್ರವನ್ನು ಮಾಡಿದ್ದೇನೆ. ಎನ್‌ಫೀಲ್ಡ್ ಓಡಿಸಿಕೊಂಡು ಇರುವ ಹುಡುಗಿಯ ಪಾತ್ರವಿದು. ಪಾತ್ರ ಚೆನ್ನಾಗಿದೆ. ನಟನೆಗೆ ಸಾಕಷ್ಟು ಅವಕಾಶವಿದೆ. ಹಾಗಾಗಿ ಖುಷಿಯಿಂದ ಒಪ್ಪಿಕೊಂಡೆ’ ಎನ್ನುತ್ತಾರೆ ಅವರು.

ನಟನೆ ಎಂಬುದು ಬರಿಯ ಮನರಂಜನೆಯ ಹವ್ಯಾಸ ಎಂದು ನಂಬಿದವರಲ್ಲ ಆಶಿಕಾ. ಅದು ತನ್ನ ವ್ಯಕ್ತಿತ್ವವನ್ನು ರೂಪಿಸುವಷ್ಟು ಪ್ರಭಾವಶಾಲಿ ಕಲಾಮಾಧ್ಯಮ ಎಂಬುದು ಅವರ ಅಭಿಪ್ರಾಯ. ‘ಒಂದೊಂದು ಪಾತ್ರವೂ ನಮಗೆ ಹಲವು ಸಂಗತಿಗಳನ್ನು ಕಲಿಸುತ್ತದೆ. ಏನನ್ನೋ ಮನಸಲ್ಲಿ ಉಳಿಸುತ್ತದೆ. ನಮ್ಮನ್ನು ಬೆಳೆಸುತ್ತದೆ. ಹಾಗಾಗಿ ನಾನು ನಟಿಸಿದ ಎಲ್ಲ ಪಾತ್ರಗಳೂ ನನ್ನ ವ್ಯಕ್ತಿತ್ವವನ್ನು ರೂಪಿಸಿವೆ, ರೂಪಿಸುತ್ತವೆ ಎಂದು ನನಗನಿಸುತ್ತದೆ’ ಎಂದು ಅವರು ಹೇಳುತ್ತಾರೆ.

ಈ ಕಾರಣಕ್ಕಾಗಿಯೇ ಸವಾಲಿನ ಪಾತ್ರಗಳಲ್ಲಿ ನಟಿಸಬೇಕು, ನಟನೆಗೆ ಜಾಸ್ತಿ ಅವಕಾಶ ಇರಬೇಕು ಎಂಬ ಆಸೆಯಲ್ಲಿ ಅವರು ಹೊಸಬಗೆಯ ಪಾತ್ರಗಳನ್ನು ಎದುರು ನೋಡುತ್ತಿದ್ದಾರೆ. ಅವರ ಅಭಿಲಾಷೆಗೆ ತಕ್ಕಂತ ಪಾತ್ರಗಳೂ ಬರುತ್ತಿವೆಯಂತೆ. ಸದ್ಯದಲ್ಲಿಯೇ ಅವರ ನಟಿಸುತ್ತಿರುವ ಇನ್ನೊಂದು ಸಿನಿಮಾ ಸೆಟ್ಟೇರುತ್ತಿದೆಯಂತೆ. ■

